# ಬೆಳಕಿನ ಕಡೆ ಮುಖ ಮಾಡೋಣ!

'ಈ ಕತ್ತಲೆ, ಈ ದೀಪ! ಇದ ಹಚ್ಚಿದನಾವ ಭೂಪ?' -ಇವು ಕವಿ ಪು.ತಿ.ನ.ರವರ ಕವಿತೆಯೊಂದರ ಮೊದಲ ಸಾಲುಗಳು. ನಾವಿಲ್ಲಿ ಕಾಣುವುದು ಸೃಷ್ಟಿಯ ಹಿಂದಿರುವ ಸೃಷ್ಟಿಕರ್ತನನ್ನು ಕುರಿತಾದ ಬೆರಗಿನ ಭಾವವನ್ನು. ಈ ಸೃಷ್ಟಿಯಲ್ಲಿ ಕತ್ತಲೆಯಿದೆ; ಸೂರ್ಯ, ಚಂದ್ರ, ತಾರೆ, ಅಗ್ನಿ- ಇತ್ಯಾದಿಗಳಿಂದ ಬರುವ ಬೆಳಕೂ ಇದೆ. 'ಇದ ಹಚ್ಚಿದನಾವ ಭೂಪ?' ಎಂಬ ಕವಿಯ ಪ್ರಶ್ನೆಯಲ್ಲಿರುವ 'ಹಚ್ಚು' ಎಂಬ ಕ್ರಿಯಾಪದ 'ದೀಪ' ಎಂಬ ಕರ್ತೃಪದಕ್ಕೆ ಸಂಗತವಾದಂತೆಯೇ 'ಕತ್ತಲೆ' ಎಂಬುದಕ್ಕೂ ಸಂಗತವಾಗಿರುವುದನ್ನು ಗಮನಿಸಬೇಕು. ಬೆಳಕು-ಕತ್ತಲೆ, ಸುಖ-ದುಃಖ, ಆಶೆ-ನಿರಾಶೆ-ಇಂಥ ದ್ವಂದ್ವಗಳನ್ನೆಲ್ಲಾ ಸೃಷ್ಟಿ ಮಾಡಿರುವಾತ ಒಬ್ಬನೇ ಭಗವಂತ ಎಂಬ ಭಾವ ಅಲ್ಲಿದೆ, ಭಗವಂತನನ್ನು 'ಭಯಕೃತ್, ಭಯನಾಶನ' ಎಂದಿದ್ದಾರೆ ಜ್ಞಾನಿಗಳು. ದ್ವಂದ್ವಗಳಿರುವುದರಿಂದಲೇ ಬದುಕಿಗೊಂದು ಸ್ವಾರಸ್ಯ ಎಂಬುದು ಸೃಷ್ಟಿಕರ್ತನಿಗೆ ಗೊತ್ತಿದೆ. ಕತ್ತಲೆ ಇರುವುದರಿಂದಲೇ ಬೆಳಕಿನ ಅಗತ್ಯ ನಮ್ಮ ಅನುಭವಕ್ಕೆ ಬರುವುದಲ್ಲವೆ?



ಆದರೆ ಕತ್ತಲೆಯನ್ನು ದೂರವಿರಿಸಬೇಕೆಂಬ ಬಯಕೆ, ಕತ್ತಲೆಯನ್ನು ಕುರಿತಾದ ಭಯ- ಇವೆಲ್ಲ ಮನುಷ್ಯನನ್ನು ಅಂಟಿಕೊಂಡೇ ಬಂದಿರುವ ಭಾವಗಳು, ಕತ್ತಲೆಯ ಪರಿಸರದಲ್ಲಿ ದೃಶ್ಯಾನುಭವದಿಂದ ನಾವು ವಂಚಿತರಾಗುತ್ತೇವಷ್ಟೆ? ಆಗ ಸಹಜವಾಗಿ ಅಭದ್ರತೆಯ ಭಾವ ನಮ್ಮನ್ನು ಕಾಡುತ್ತದೆ. ಆದ್ದರಿಂದಲೇ ಕತ್ತಲಲ್ಲಿ ಮಗು 'ಗುಮ್ಮ'ನನ್ನು ಕಲ್ಪಿಸಿಕೊಂಡು ಹೆದರುತ್ತದೆ; ದೊಡ್ಡವರು ದೆವ್ವವನ್ನೋ, ದುಷ್ಟ ಜೀವಿಗಳನ್ನೋ ಕಲ್ಪಿಸಿಕೊಂಡು ಭಯಪಡುತ್ತಾರೆ. ಒಟ್ಟಿನಲ್ಲಿ ಅಂಧಕಾರವೆಂಬುದು ಭಯವನ್ನು ಹುಟ್ಟಿಸುವಂಥದು. ಕತ್ತಲೆ ಎಂಬುದು ಕೇವಲ ಭೌತಿಕ ಪ್ರಪಂಚಕ್ಕಷ್ಟೇ ಸೀಮಿತವಲ್ಲ, ಅಜ್ಞಾನ, ದೌಷ್ಟ್ಯ, ದಾರಿದ್ರ್ಯ, ದುಃಖ-ಎಲ್ಲವೂ ಕತ್ತಲೆಯ ಮುಖಗಳೇ. ಅವೆಲ್ಲ ಮನುಷ್ಯನ ಅಂತರಂಗ ಪ್ರಪಂಚಕ್ಕೆ ಸಂಬಂಧಿಸಿದಂಥವು. ಸಂವೇದನಾ ಶೀಲನಾಗಿರುವ ಮನುಷ್ಯನಿಗೆ ಈ ಬಗೆಯ ಕತ್ತಲೆಯೂ ಭೀತಿಯನ್ನು ಹುಟ್ಟಿಸುತ್ತದೆ. ಅಂತರಂಗದಲ್ಲಿ ಬೆಳಕನ್ನು ಆವಾಹನೆ ಮಾಡಿಕೊಂಡಾಗ ಮಾತ್ರ ಅಲ್ಲಿ ಉಂಟಾಗುವ ತಮೋಭೀತಿ ಕರಗುತ್ತದೆ. ಅದಕ್ಕಾಗಿಯೇ ಉಪನಿಷತ್ತಿನ ಋಷಿ 'ಅಸತೋ ಮಾ ಸದ್ಗಮಯ; ತಮಸೋ ಮಾ ಜ್ಯೋತಿರ್‌ಗಮಯ, ಮೃತ್ಯೋರ್ಮಾ ಅಮೃತಂಗಮಯ' ಎಂದು ಸಾರಿರುವುದು. ಅಸತ್ಯದಿಂದ ಸತ್ಯದತ್ತ ಹೋಗುವುದು, ಮೃತ್ಯುವಿನಿಂದ ಅಮೃತತ್ವದತ್ತ ಚಲಿಸುವುದು- ಎರಡೂ ಕತ್ತಲಿನಿಂದ ಬೆಳಕಿನ ಕಡೆಯ ಪಯಣಗಳೇ.

ಕತ್ತಲೆಯ ವ್ಯಾಪ್ತಿಯನ್ನು ಕುರಿತು ಅಲ್ಲಮಪ್ರಭುವಿನ ಒಂದು ಅರ್ಥಪೂರ್ಣ ವಚನ ಹೀಗಿದೆ; 'ಹಿಡಿವ ಕೈಯ ಮೇಲೆ ಕತ್ತಲೆಯಯ್ಯಾ; ನೋಡುವ ಕಂಗಳ ಮೇಲೆ ಕತ್ತಲೆಯಯ್ಯಾ; ನೆನೆವ ಮನದ ಮೇಲೆ ಕತ್ತಲೆಯಯ್ಯಾ; ಕತ್ತಲೆಯೆಂಬುದು ಇತ್ತಲೆಯಯ್ಯಾ, ಗುಹೇಶ್ವರನೆಂಬುದು ಅತ್ತಲೆಯಯ್ಯಾ' ಭವಿಯಾಗಿದ್ದು ಭಕ್ತನಂತೆ ನಟಿಸುತ್ತಿರುವ ವ್ಯಕ್ತಿಯ ಸ್ಥಿತಿಯಿದು, ಕೈಯ ಮೇಲೆ ಇಷ್ಟಲಿಂಗವಿದ್ದರೂ ಆತನಿಗೆ ಶಿವಸ್ಪರ್ಶದ ಅನುಭವವಾಗುವುದಿಲ್ಲ. ಏಕೆಂದರೆ ಕೈಯಮೇಲೆ ಕತ್ತಲೆ ಆವರಿಸಿದೆ. ಆತನ ಕಣ್ಣಿಗೆ ಕಾಣಿಸುವುದು ಕೇವಲ ಶಿಲೆ ಮಾತ್ರ, ಶಿವನಲ್ಲ; ಕಣ್ಣನ್ನು ಅಜ್ಞಾನದ ಕತ್ತಲು ಆವರಿಸಿರುವುದೇ ಇದಕ್ಕೆ ಕಾರಣ. ನೆನೆಯ ಬೇಕಾದ ಮನಸ್ಸಿನಲ್ಲೂ ಲೌಕಿಕದ ಕತ್ತಲೆ ತುಂಬಿದೆ; ಅಲ್ಲಿ ಶಿವ ಸಾನ್ನಿಧ್ಯವಿಲ್ಲ. ಹೀಗೆ ಸ್ಪರ್ಶ ಕಾಂತಿ, ದರ್ಶನ ಕಾಂತಿ, ಭಾವಕಾಂತಿ- ಯಾವುದೂ ಆತನಿಗೆ ಲಭ್ಯವಿಲ್ಲ. ಕತ್ತಲೆಗೆ ಲೌಕಿಕ ಮುಖ, ಅಜ್ಞಾನದ ಮುಖ ಎಂಬ ಎರಡು ಮುಖಗಳು ('ಇತ್ತಲೆ') ಹೀಗಾಗಿ ಶಿವನ ಮುಖ ('ಅತ್ತಲೆ') ಆ ಕಡೆ ತಿರುಗಿದೆ ಎನ್ನುತ್ತಾನೆ ಅಲ್ಲಮ.

ಆದ್ದರಿಂದ ನಮ್ಮ ಅಂತರಂಗದ ಹಾಗೂ ಬಹಿರಂಗದ ಎರಡು ಮುಖಗಳೂ ಬೆಳಕಿನ ಕಡೆ ತಿರುಗಬೇಕು. ಆಗ ಮುಖಗಳೂ ಬೆಳಗುತ್ತವೆ: ಜಗತ್ತೂ ಬೆಳಗುತ್ತದೆ. 'ಬೆಳಕಿನ ಕಡೆ ಮುಖ ಮಾಡೋಣ, ಕತ್ತಲೊಡನೆ ಸೆಣಸಾಡೋಣ' ಎಂಬುದು ನಮ್ಮ ದೈನಂದಿನ ಪ್ರಾರ್ಥನೆಯಾಗಬೇಕು!

■ ವೈನತೇಯ

## ಮಾತೇ ಮುತ್ತು

★ ನನ್ನ ನಿಟ್ಟುಸಿರಿನಲಿ ಬನವು ಬಾಡುತಲಿಹುದು, ಕರುಳೆಂಬ ಕರುಳೇಕೆ ಕರಗದಿಹುದು.
-ಮಧುರಚೆನ್ನ

★ ಸತ್ತ ಕಲ್ಲಳ ಮುಂದೆ ಅತ್ತು ಕರೆದುದು ಸಾಕು, ಜೀವದಾತೆಯನಿಂದು ಕೂಗಬೇಕು.
-ಕುವೆಂಪು

★ ಸಾರ್ವಭೌಮರಾ ನೆತ್ತಿಯ ಕುಕ್ಕಿ, ಹಕ್ಕಿ ಹಾರುತಿದೆ ನೋಡಿದಿರಾ?
-ದ.ರಾ.ಬೇಂದ್ರೆ

★ ಕತ್ತಲಿನಿಂದ ಕತ್ತಲಿಗೇ ತಡಕಾಡಿಕೊಂಡು ಬಂದಿವೆ ಹೆಜ್ಜೆ ಶತಮಾನದಿಂದಲೂ, ನಡು ನಡುವೆ ಒಂದಷ್ಟು ಬೆಳಕು ಬೇಕೆಂದು ಆಗಾಗ ಕಡ್ಡಿ ಗೀಚಿದ್ದೇವೆ.
-ಜಿ.ಎಸ್.ಶಿವರುದ್ರಪ್ಪ

★ ದಯೆಗಿಂತ ದೊಡ್ಡ ಬುದ್ಧಿವಂತಿಕೆ ಎಲ್ಲಿ ಸಿಗುತ್ತದೆ?
-ರೂಸೋ

★ ದಯೆಯೇ ತೃಪ್ತಿಯನ್ನು ತರುವ ಸತ್ಯ.
-ಖಲೀಲ್ ಗಿಬ್ರಾನ್

★ 'ಕೊಟ್ಟೆಯಾ' ಮರೆತುಬಿಡು; 'ತೆಗೆದುಕೊಂಡೆಯಾ' ನೆನಪಿಡು.
-ಹಂಗೆರಿ ಗಾದೆ

★ ಮನುಷ್ಯ ಹೆಜ್ಜೆ ಇಡದಿರುವ ಸಾವಿರ ದಾರಿಗಳು ಇನ್ನೂ ಇವೆ.
-ಝರತೃಷ್ಟ

★ ಎಲ್ಲ ವಿಚಾರಗಳನ್ನೂ ಸೇರಿಯೇ ಯೋಚಿಸಬೇಕು, ನಿರ್ಧರಿಸಬೇಕು. ದಂಪತಿಗಳಲ್ಲಿ ಯಾರೊಬ್ಬರೂ ಸ್ವಾತಂತ್ರ್ಯ ವಹಿಸಬಾರದು.
-ಕೆ.ವಿ.ಅಯ್ಯರ್

★ ದೊಡ್ಡವರ ದುಃಖಗಳನ್ನು ಪ್ರಪಂಚ ಹಿಗ್ಗಿಸಿ ಬೃಹದಾಕಾರದಲ್ಲಿ ತೋರಿಸುತ್ತದೆ; ಬಡವರ ದುಃಖವನ್ನಾರೂ ಗಮನಿಸರು.
-ಅಲಿವರ್ ಗೋಲ್ಡ್‌ಸ್ಮಿತ್

★ ದುಃಖವೆಂಬುದು ಹರಡಿ ಹಬ್ಬುವ ಜಾಡ್ಯದಂತೆ; ಇದ್ದಾಗ ಅದರಿಂದ ಎಣಿಸಲಾಗದ ಕಷ್ಟ, ನಷ್ಟ; ಇಲ್ಲದಿರುವಾಗ ಯಾವೊತ್ತು ಬಂದು ತಟ್ಟುವುದೋ ಎಂಬ ಭೀತಿ.
-ಎಸ್.ವಿ.ರಂಗಣ್ಣ

★ ಕಣ್ಣುಮುಚ್ಚಿ ಕೊಡು; ಕಣ್ಣು ತೆರೆದು ತೆಗೆದುಕೋ.
-ಜರ್ಮನ್ ಗಾದೆ

★ ದುಃಖದ ನಿಜವಾದ ಅನುಭವವು ನಾವು ನಿರೀಕ್ಷಿಸಿದಷ್ಟು ಕಠಿಣವಾಗಿರುವುದಿಲ್ಲ.
-ವೆಟ್ಟೂರು ರಾಮನ್ ನಾಯರ್

★ ದುಃಖವನ್ನು ದೂರ ಸರಿಸುವುದಕ್ಕೆ ಯತ್ನ ಮಾಡಿದಷ್ಟೂ ಅದು ಹೆಗಲನ್ನೇರುವುದು.
-ರವೀಂದ್ರನಾಥ ಠಾಕೂರ್

★ ಕಟ್ಟಿಕೊಂಡವರಿಗೆ ಬಿಟ್ಟ ದುಃಖ ತಪ್ಪಿದ್ದಲ್ಲ; ಬಿಟ್ಟೇ ಇರುವವನಿಗೆ ದುಃಖವೇ ಇಲ್ಲ.
-ಮಾಸ್ತಿ ವೆಂಕಟೇಶ ಅಯ್ಯಂಗಾರ್

★ ಸಜ್ಜನರ ನಡುವೆ ದುಃಖದ ಬಾಗಿಲುಗಳು ತಾವಾಗಿಯೇ ತೆರೆದುಕೊಳ್ಳುತ್ತವೆ.
-ಕಾಳಿದಾಸ

★ ಇತರರ ದುಃಖ- ನೋವುಗಳಲ್ಲಿ ನಮಗೆ ಸ್ವಲ್ಪಮಟ್ಟಿಗೆ ಸಂತೋಷವಿದೆ ಎಂಬುವುದು ಖಚಿತ.
-ಎಡ್ಮಂಡ್ ಬರ್ಕ್